**<u>ದಿನಾಂಕಃ 24-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಪಿ.ಎನ್.ಎ., ಆರೋಪಿ ಪರ ವಕೀಲರಿಂದಃ</u>**

**5.** ನಾನು ನನ್ನ ಮತ್ತು ನನ್ನ ಮಕ್ಕಳ ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಇಲ್ಲಿ ಅವರು ಅದನ್ನು ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ದಿನಾಂಕಃ 03-02-2024 ರ ನಂತರ ನಮ್ಮ ವಕೀಲರನ್ನು ಬೇಟಿಯಾಗಿರುತ್ತೇನೆ ಅವರಿಗೆ ಆದಾಯ ತೆರಿಗೆ ದಾಖಲೆಗಳನ್ನು ಹಾಜರುಪಡಿಸಿದ ಬಗ್ಗೆ ಕೇಳಿಲ್ಲ. ಮಹಾಲಕ್ಷ್ಮೀ ಕೋ-ಆಫ್ ಬ್ಯಾಂಕ್‌ನಲ್ಲಿ ಮ್ಯಾನೇಜರ ಅಂತಾ ಕೆಲಸ ಮಾಡುತ್ತಿರುವ ನನ್ನ ಮಗನ ಹೆಸರು ಬಸವರಾಜ ಮಲ್ಲೇಶಪ್ಪ ಪಟ್ಟಣಶೆಟ್ಟಿ ಅಂತಾ ಇರುತ್ತದೆ. ನನ್ನ ಇನ್ನೊಬ್ಬ ಮಗ ಇಟ್ಟಿಗೆ ವ್ಯಾಪಾರ ಮಾಡುತ್ತಿದ್ದು ಆತನ ಹೆಸರು ಮಹಾಂತೇಶ ಮಲ್ಲೇಶಪ್ಪ ಪಟ್ಟಣಶೆಟ್ಟಿ ಅಂತಾ ಇರುತ್ತದೆ. ಬಸವರಾಜ ಈತನಿಗೆ ಪ್ರತಿ ತಿಂಗಳು ರೂ. 65,000/- ಸಂಬಳ ಬರುತ್ತದೆ. ಬಸವರಾಜ ಈತ ಆದಾಯ ತೆರಿಗೆ ಘೋಷಣೆ ಮಾಡಿದ ಬಗ್ಗೆ ನಾನು ಕೇಳಿಲ್ಲ. ಬಸವರಾಜ ಈತ ನನ್ನ ಜೊತೆಯೇ ವಾಸವಿರುತ್ತಾನೆ. ನನಗೆ ಒಟ್ಟು 3 ಜನ ಗಂಡು ಮಕ್ಕಳು. ನಾನು ಹಾಗೂ ನನ್ನ 3 ಮಕ್ಕಳು ಒಟ್ಟಾಗಿ ವಾಸವಿರುತ್ತೇವೆ. ನನ್ನ ಇಬ್ಬರೂ ಮಕ್ಕಳ ಮದುವೆಯಾಗಿದ್ದು, ಇನ್ನೊಬ್ಬ ಮಗ ಶಿವಬಸಪ್ಪ ಈತನ ಮದುವೆಯಾಗಿಲ್ಲ.

**6.** ನಾನು ಕಳೆದ 9-10 ವರ್ಷಗಳಿಂದ ರೇಷನ ಅಂಗಡಿ ನಡೆಸುತ್ತಿದ್ದೇನೆ. ನನ್ನ ರೇಷನ ಅಂಗಡಿಯ ವ್ಯಾಪ್ತಿಯಲ್ಲಿ ಬರುವ ಪಡಿತರ ಚೀಟಿ ಹೊಂದಿದ ಕುಟುಂಬದವರಿಗೆ ಮಾತ್ರ ರೇಶನ ನೀಡುತ್ತೇವೆ. ಪಡಿತರ ಚೀಟಿಯಲ್ಲಿ ಇರುವ ಸದಸ್ಯರನ್ನು ಒಂದು ಕುಟುಂಬ ಅಂತಾ ಸರ್ಕಾರ ಪರಿಗಣಿಸುತ್ತದೆ ಅಂದರೆ ಸರಿ. ನಮ್ಮ ಕುಟುಂಬದಲ್ಲಿ ನನ್ನ ಹೆಂಡತಿಯ ಹೆಸರಿನಿಂದ ಮಾತ್ರ ಪಡಿತರ ಚೀಟಿ ಇರುತ್ತದೆ. ಮಕ್ಕಳ ಹೆಸರಿನಲ್ಲಿ ಇರುವುದಿಲ್ಲ. ಆ ಪಡಿತರ ಚೀಟಿಯಲ್ಲಿ ನನ್ನ ಹಾಗೂ ನನ್ನ ಹೆಂಡತಿಯ

ಹೆಸರು ಮಾತ್ರ ಇರುತ್ತದೆ. ನನಗೆ 10 ಕೆ.ಜಿ. ರೇಶನ ಕೊಡುವ ಕಾರ್ಡ ಬಿಪಿಎಲ್ ರೇಷನ್ ಕಾರ್ಡ ಇರುತ್ತದೆ. ಬಿಪಿಎಲ್ ರೇಷನ್ ಕಾರ್ಡ ಎಂದರೆ ಬಡತನ ರೇಖೆಗಿಂತ ಕೆಳಗೆ ಇರುವ ಜನರಿಗೆ ಕೊಡುವ ಕಾರ್ಡ ಅಂದರೆ ಸರಿ. ಶೋಭಾ ಪಟ್ಟಣಶೆಟ್ಟಿ ಅಂದರೆ ನನ್ನ ಸೊಸೆ. ಸುಮಂತ ಪಟ್ಟಣಶೆಟ್ಟಿ ಅಂದರೆ ನನ್ನ ಮೊಮ್ಮಗ. ನನ್ನ ಮಗ ಬಸವರಾಜ ಈತನನ್ನು ಬಸಲಿಂಗಪ್ಪ ಎಂಬ ಹೆಸರಿನಿಂದ ಕರೆಯುತ್ತಾರೆ ಅಂದರೆ ಸರಿ. ನಾನು ನಡೆಸುವ ರೇಷನ್ ಅಂಗಡಿಯ ನಂಬರ 81 ಇರುತ್ತದೆ ಅಂದರೆ ಸರಿ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಅದು ನನ್ನ ಸೊಸೆ ಹಾಗೂ ಮೊಮ್ಮಗನ ಛಾಯಾಚಿತ್ರ ಇರುತ್ತದೆ ಅಂತಾ ಸಾಕ್ಷಿ ಒಪ್ಪಿದ್ದರಿಂದ ಅದನ್ನು ***ನಿಡಿ-1*** ಅಂತಾ ಗುರುತಿಸಲಾಯಿತು. ನನ್ನ ತಾಯಿ ಈಗ ತೀರಿಕೊಂಡಿದ್ದು, ಅವರು ನನ್ನ ಬಳಿ ಇರುತ್ತಿರಲಿಲ್ಲ. ಅವರು ನನ್ನ ತಾಯಿ ಅಂದರೆ ಮಲತಾಯಿ ಆಗಬೇಕು. ಅವಳ ಹೆಸರಿನಿಂದ ಕೂಡಾ ಬಿಪಿಎಲ್ ಕಾರ್ಡ ಇತ್ತು ಅಂದರೆ ನನಗೆ ಗೊತ್ತಿಲ್ಲ. ನಿಡಿ-1 ಸಹ ಬಿಪಿಎಲ್ ಕಾರ್ಡ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನನ್ನ ರೇಷನ ಅಂಗಡಿಗೆ ಸಂಬಂಧಿಸಿದ ಬಿಪಿಎಲ್ ರೇಷನ್ ಕಾರ್ಡ ಹೊಂದಿರುವವರ ಯಾದಿ ತರಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಇನ್ನೊಬ್ಬ ಮಗನಿಗೂ ಸಹ ಬಿಪಿಎಲ್ ಕಾರ್ಡ ಇರಬಹುದು. ನಾವು ಕೂಡಿಯೇ ಇದ್ದರೂ ಸಹ ಅಡುಗೆ ಬೇರೆ ಬೇರೆ ಮಾಡುತ್ತೇವೆ. ನನ್ನ ಮಲತಾಯಿ ಹಾಗೂ ಇಬ್ಬರೂ ಮಕ್ಕಳು ಸಹ ಬಿಪಿಎಲ್ ಕಾರ್ಡ ಹೊಂದಿದ್ದರು ನೆನಪಿಲ್ಲ, ಗೊತ್ತಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**7.** ನಾಗೇಂದ್ರನಮಟ್ಟಿಯಲ್ಲಿ ನನ್ನ ಹೆಂಡತಿ ಹಾಗೂ ಮಕ್ಕಳ ಹೆಸರಿನಲ್ಲಿರುವ ಪ್ಲಾಟಗಳ ನಂಬರ ಹೇಳಲು ಬರುವುದಿಲ್ಲ. ಅದನ್ನು ಅವರು ಸ್ವಂತ ಖರೀದಿಸಿರುತ್ತಾರೆ. ಅವರು ಅಲ್ಲಿ ಮನೆ ಕಟ್ಟಿಸಿಕೊಂಡಿಲ್ಲ. ನನ್ನ ಮಗ ಬಸಲಿಂಗಪ್ಪ ಯಾರ ಕಡೆಯಿಂದ ಪ್ಲಾಟ ಖರೀದಿ ಪಡೆದಿರುತ್ತಾನೆ ಅಂತಾ ಗೊತ್ತಿಲ್ಲ. ಅದರಲ್ಲಿ ಮನೆ ಕಟ್ಟಿಸಿಕೊಂಡ ಬಗ್ಗೆ ಗೊತ್ತಿಲ್ಲ. ಅಲ್ಲಿ ಆತ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮನೆ

ಪಿಡಬ್ಲ್ಯೂ-1

ಕಟ್ಟಿಸಿಕೊಂಡಿರುತ್ತಾರೆ ಅಂದರೆ ಗೊತ್ತಿಲ್ಲ. ನಾಗೇಂದ್ರನಮಟ್ಟಿಯಲ್ಲಿ ಬಸಲಿಂಗಪ್ಪ ಮಲ್ಲೇಶಪ್ಪ ಪಟ್ಟಣಶೆಟ್ಟಿ ಅಂತಾ ನನ್ನ ಮಗನನ್ನು ಹೊರತುಪಡಿಸಿ ಬೇರೆ ಯಾರು ಇರುವುದಿಲ್ಲ. ಸಾಕ್ಷಿಗೆ ಒಂದು Beneficiary statement, PMAY(U), ಅನ್ನು ತೋರಿಸಲಾಗಿ ಅದರಲ್ಲಿರುವ ಹೆಸರು ತನ್ನ ಮಗನದು ಅಂತಾ ಸಾಕ್ಷಿ ಒಪ್ಪಿದ್ದರಿಂದ ಅದನ್ನು ***ನಿಡಿ-2*** ಅಂತಾ ಗುರುತಿಸಲಾಯಿತು. ವಸತಿ ರಹಿತರಿಗೆ ಹಾಗೂ ಅನ್ನ ಇಲ್ಲದವರಿಗೆ ಸರ್ಕಾರದವರು ಬಿಪಿಎಲ್ ಕಾರ್ಡ ಹಾಗೂ ಸ್ಲಂ ಬೋರ್ಡನ ಮನೆ ನೀಡುತ್ತಾರೆ ಅಂದರೆ ಸರಿ.

**8.** ಮೆಹರುನ್ನೀಸಾ ನಬೀಹುಸೇನ ಕೋಳೂರ, ಉರ್ಫ ನದಾಪ ಇವಳ ಪರಿಚಯ ನನಗೆ 6-7 ವರ್ಷಗಳಿಂದ ಇರುತ್ತದೆ. ಈ ಹೆಣ್ಣುಮಗಳು ಸೈಟ್ ಖರೀದಿ ಮಾಡುವುದಿದೆ ಅಂತಾ ಹೇಳಿ ಸಾಲ ಕೇಳಲು ಬಂದಿರುವುದಿಲ್ಲ, ಆರೋಪಿ ಬಂದಿದ್ದ. ಆರೋಪಿ ಸರ್ವೆ ನಂಬರ 304 ಎ/1 ಎ/1 ಎ, ಪ್ಲಾಟ ನಂ. 217 ಇದನ್ನು ಖರೀದಿಸಲು ಹಣ ಬೇಕು ಅಂತಾ ಕೇಳಲು ಬಂದಿದ್ದ ಅಂದರೆ ಸರಿ. ಈ ಸೈಟ್ ಖರೀದಿ ಮಾಡಲು ಹಣ ಬೇಕು ಅಂತಾ ಕೇಳಿ ಬೇರೆ ಯಾರು ಬಂದಿರಲಿಲ್ಲ. ಈ ಸೈಟ್ ಖರೀದಿಸಲು ಹಣ ಬೇಕು ಅಂತಾ ಹೇಳಿ ನನ್ನ ಬಳಿ ಹಣ ಪಡೆದು ಚೆಕ್ ನೀಡಿಲ್ಲ ಹಾಗೂ ಅಗ್ರಿಮೆಂಟ್ ಸಹ ಬರೆದುಕೊಟ್ಟಿಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದರಲ್ಲಿರುವ ಸಹಿ ತನ್ನದು ಅಂತಾ ಸಾಕ್ಷಿ ಒಪ್ಪಿದ್ದರಿಂದ ಒಂದು ಕೈಗಡ ಹಣ ಮರು ಪಾವತಿ ಮಾಡಿದ ಕರಾರು ಪತ್ರವನ್ನು ***ನಿಡಿ-3*** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಡಿ-3(ಎ) ಅಂತಾ ಗುರುತಿಸಲಾಯಿತು. ಮಲ್ಲೇಶಪ್ಪ ಬಸವಲಿಂಗಪ್ಪ ಪಟ್ಟಣಶೆಟ್ಟಿ ಅಂದರೆ ನಾನೇ. ನನಗೆ ನೂರಅಹ್ಮದ ಮಕಾಶಿ ಇವರ ಪರಿಚಯವಿರುವುದಿಲ್ಲ. ನಿಡಿ-3 ರಲ್ಲಿ ಪ್ಲಾಟ ನಂಬರ 304 ಎ/1 ಎ/1 ಎ, ಪ್ಲಾಟ ನಂಬರ 217 ಅಂತಾ ಬರೆದಿರುತ್ತದೆ ಅಂದರೆ ಸಾಕ್ಷಿ ಅದನ್ನು ಆರೋಪಿ ಬರೆಸಿರುತ್ತಾನೆ ಅಂತಾ ಹೇಳುತ್ತಾರೆ. ನಿಡಿ-3 ರ ದಾಖಲೆ ಇದ್ದ ಬಗ್ಗೆ ನನಗೆ 3 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ನಿಡಿ-3 ರ ದಾಖಲೆಯನ್ನು ದಿನಾಂಕಃ07-09-2020 ರಂದು ಬರೆಸಿರುತ್ತಾರೆ ಅಂದರೆ ಸರಿ. ನಾನು ವಕೀಲರ ಮೂಲಕ

ಆರೋಪಿಗೆ ನೋಟಿಸ್ ನೀಡುವ ಕಾಲಕ್ಕೆ ನಿಡಿ-3 ರ ದಾಖಲೆ ಇದ್ದ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಆರೋಪಿ ಹಾಗೂ ನೂರಅಹ್ಮದ ಮಕಾಶಿ ಇವರು ಮಾವ-ಅಳಿಯ ಸಂಬಂಧ ಹೊಂದಿರುತ್ತಾರೆ. ಅವರು ಏನೂ ಬರೆದುಕೊಂಡು ಬಂದಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ನಿಡಿ-3 ರಲ್ಲಿ ನೂರಅಹ್ಮದ ಮಕಾಶಿ ದುಡ್ಡು ಪಡೆದಿರುತ್ತಾನೆ ಅಂತಾ ಬರೆದಿದೆ ಅಂದರೆ ಸಾಕ್ಷಿ ಆರೋಪಿಯೇ ಹಣ ಪಡೆದಿರುತ್ತಾನೆ ಅಂತಾ ಹೇಳುತ್ತಾರೆ. ನಿಡಿ-3 ರ ದಾಖಲೆ ಹಣ ಪಡೆದ ಆರೋಪಿಯ ಬದಲಾಗಿ ನೂರಅಹ್ಮದ ಮಕಾಶಿ ಈತನ ಹೆಸರು ಏಕೆ ಬರೆದಿರುತ್ತಾರೆ ಅಂತಾ ನಾನು ಕೇಳಿಲ್ಲ. ಆ ರೀತಿ ನಾನು ಏಕೆ ಬರೆದಿರುತ್ತಾರೆ ಅಂತಾ ಆರೋಪಿಯನ್ನು ಕೇಳಿರುತ್ತೇನೆ. ಆ ರೀತಿ ನಿಡಿ-3 ರಲ್ಲಿ ಆರೋಪಿಯ ಹೆಸರು ಬರೆದುಕೊಡುವಂತೆ ನಾನು ಅದನ್ನು ಆರೋಪಿಗೆ ಮರಳಿಕೊಟ್ಟಿಲ್ಲ. ಈ ರೀತಿ ಯಾವುದೇ ವ್ಯವಹಾರ ಆಗಿಲ್ಲ. ನಾನು ಭದ್ರತೆಯ ಕುರಿತು ನೂರಅಹ್ಮದ ಮಕಾಶಿ ಅಥವಾ ಆತನ ಮಗನ ಕಡೆಯಿಂದ ಚೆಕ್ ಪಡೆದಿಲ್ಲ. ದೂರಿನಲ್ಲಿ ಹೇಳಿದ ಪ್ಲಾಟ ಬಗ್ಗೆ ಹಣ ನೀಡಲಾಗಿದೆ ಅಂತಾ ನಿಡಿ-3 ರಲ್ಲಿ ಬರೆದಿದೆ ಅಂದರೆ ಸಾಕ್ಷಿ ನೂರಅಹ್ಮದ ಈತನೊಂದಿಗೆ ನನ್ನ ಯಾವುದೇ ವ್ಯವಹಾರ ಆಗಿಲ್ಲ ಅಂತಾ ಹೇಳುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಮುಂದಿನ ಬಾರಿಗೆ ಸಂಪೂರ್ಣ ಪಾಟೀ ಸವಾಲು ಮುಕ್ತಾಯಗೊಳಿಸುವ ನಿಬಂಧನೆಯೊಂದಿಗೆ, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 24-07-2024**

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.